O.S **06/2020**

D.W.1

ಸಾಕ್ಷಿಯನ್ನು ದಿಃ 24-02-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಬಿ.ಎಮ್.ಎಸ್. ವಾದಿ ಪರ ವಕೀಲರಿಂದ

ಗೋವಿಂದಪ್ಪ ನನ್ನ ಅಜ್ಜ. ಅವರಿಗೆ ಶಿವಪ್ಪ, ಹಾಲಪ್ಪ, ಕಲ್ಲಪ್ಪ, ಬಸಪ್ಪ, ಶಂಕ್ರಪ್ಪ ಎಂಬ ಮಕ್ಕಳು ಇರುತ್ತಾರೆಂದರೆ ಸರಿ. ನನ್ನ ತಂದೆಯ ಹೆಸರು ಶಂಕ್ರಪ್ಪ ಇರುತ್ತದೆ 3 ನೇ ಪ್ರತಿವಾದಿ ಶೇಖಮ್ಮ ನನ್ನ ತಾಯಿ ಎಂದರೆ ಸರಿ. ಶಂಕ್ರಪ್ಪನಿಗೆ ನಾನು, 2 ನೇ ಪ್ರತಿವಾದಿ ಹಾಗೂ ವಾದಿ ಮಕ್ಕಳು ಇರುತ್ತೇವೆಂದರೆ ಸರಿ. ಸರ್ವೆ ನಂ. 2/1 ಮತ್ತು 2/2 ನ್ನು 1956 ನನ್ನ ಅಜ್ಜ ಗೋವಿಂದಪ್ಪ ಖರೀದಿ ಹಿಡಿದಿರುತ್ತಾರೆಂದರೆ ಸರಿ. ದಾವಾ ಐಟಂ ನಂ. ಎ ಇದು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಡ ನಂ. 1165 ರ ಪ್ರಕಾರ ಗೋವಿಂದಪ್ಪ ಮತ್ತು ಅವರ ಮಕ್ಕಳ ನಡುವೆ ಆಸ್ತಿ ಹಂಚಿಕೆ ಆಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ. ಬಿ ಯನ್ನು ನನ್ನ ಅಜ್ಜ ಖರೀದಿ ಮಾಡಿದ ಬಗ್ಗೆ ಡ ನಂ. 95 ಮತ್ತು 96 ದಾಖಲು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ದಿನಾಂಕಃ 21.01.1979 ರಂದು ನನ್ನ ತಂದೆ ಮೃತಪಟ್ಟಿರುತ್ತಾರೆಂದರೆ ಸರಿ. ನಿಪಿ-18 ಪ್ರಕಾರ ದಾವಾ ಐಟಂ ನಂ. ಬಿ ಯು ಬಸಪ್ಪ ನನ್ನ ತಂದೆಯ ಸಹೋದರನಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ. ಎ ನನ್ನ ದೊಡಪ್ಪನಾದ ಹಾಲಪ್ಪನಿಗೆ ಬಂದಿರುತ್ತದೆ ಎಂದರೆ ಸರಿ. ದಿಃ 10.11.1964 ರಂದು ಸರ್ವೆ ನಂ. 2/1 ಮತ್ತು 2/2 ನ್ನು ಹಂಚಿಕೊಂಡಿದ್ದು ಸದರಿ ಆಸ್ತಿ ಹಂಚಿಕೆಯಲ್ಲಿ 2/1 ಬಸಪ್ಪನ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಅದರ ಪ್ರಕಾರ ಡ ನಂ. 147 ದಾಖಲೆ ಆಗಿರುತ್ತದೆ ಎಂದರೆ ಸರಿ ಸದರಿ ದಾಖಲೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ಡ ನಂ.2041 ಪ್ರಕಾರ ಕುಟುಂಬ ಸದಸ್ಯರ ಅನುಕೂಲಕ್ಕಾಗಿ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿದ್ದು ಆ ವೇಳೆ ಸರ್ವೆ ನಂ. 129/1 ನಮ್ಮ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಪಿ-21 ಎಂದು ಗುರುತಿಲಾಯಿತು. ನನ್ನ ದೊಡ್ಡಪ್ಪ ನಾದ ಬಸಪ್ಪ ಗೋವಿಂದಪ್ಪ ಮುಂಡವಾಡ ರವರು ದಾವಾ ಐಟಂ ನಂ. ಬಿ ಯನ್ನು ನನಗೆ ಹಾಗೂ ನನ್ನ ಸಹೋದರನಾದ ಪ್ರಕಾಶನ ಪಾಲಿಗೆ ಬಿಟ್ಟು ಕೊಟ್ಟಿರುತ್ತಾರೆ. ಆಸ್ತಿ ಹಂಚಿಕೆ ವೇಳೆ ನನ್ನ ತಂದೆಗೆ ಯಾವುದೇ ಪಾಲನ್ನು ನೀಡದ ಕಾರಣ ನನ್ನ ಸಹೋದರೆಲ್ಲರೂ ಸೇರಿ ದಾವಾ ಐಟಂ ಬಿ ನ್ನು ತಂದೆಯ ಪಾಲಿಗೆ ಬಿಟ್ಟು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾವು ಅಲ್ಪವಯಿ ಆದ ಕಾರಣ ನನ್ನ ತಾಯಿ ನಮ್ಮ ಪರವಾಗಿ ಕುಟುಂಬ ವ್ಯವಸ್ಥಾಪಕ ಪತ್ರವನ್ನು ಮಾಡಿಕೊಂಡಿರುತ್ತಾರೆಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ವಾದಿಯು 1972 ರಲ್ಲಿ ಜನಿಸಿರುತ್ತಾರೆ. ನಾನು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದೆ. ನನ್ನ ಸಹೋದರ ಹುಬ್ಬಳ್ಳಿಯಲ್ಲಿ ವ್ಯವಹಾರ ಮಾಡುತ್ತಿದ್ದರು. ನನ್ನ ತಾಯಿ ವಾದಿಯರೊಂದಿಗೆ ವಾಸ ಇದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯೇ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಬಸಪ್ಪ ಹಕ್ಕನ್ನು ಬಿಟ್ಟು ಕೊಟ್ಟಿದಕ್ಕೆ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಬಸಪ್ಪ ಹಾಗೂ ಹಾಲಪ್ಪ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನೊಂದಾಯಿತ ದಾಖಲೆ ಇರುವುದೋ ಇಲ್ಲವೊ ನನಗೆ ಗೊತ್ತಿಲ್ಲ. ನೊಂದಣೆಯಾದ ಬಗ್ಗೆ ನನಗೆ ತಿಳುವಳಿಕೆ ಬಂದ ನಂತರವೂ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಹಕ್ಕು ಬಿಟ್ಟ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಗಳಲ್ಲಿ ತಮ್ಮ ಪಾಲನ್ನು ನೀಡುವಂತೆ ನಮ್ಮ ಬಳಿ ಕೇಳಿಕೊಂಡಿರುತ್ತಾರೆಂದರೆ ಸರಿಯಲ್ಲ. ದಿಃ 06.06.2019 ರಂದು ನಮಗೆ ಕಾನೂನು ಸೂಚನಾ ಪತ್ರ ವನ್ನು ನೀಡಿದ್ದರು ಎಂದರೆ ಸರಿ. ಪ್ರಶ್ನೆಯನ್ನು ಪುನಃ ಕೇಳಿದಾಗ ಸಾಕ್ಷಿ ನನಗೆ ನೋಟಿಸ ಬಂದಿಲ್ಲಾ ಎಂದು ನುಡಿಯುತ್ತಾರೆ. ಪಿ ಡಬ್ಲೂ 2 ಮತ್ತು 3 ನಮ್ಮ ಮನೆಗೆ ಬಂದು ವಾದಿ ಪರ ಹಿಸ್ಸೇ ಕೇಳಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಈಗಲೂ ವಾದಿಯೊಂದಿಗೆ ವಾಸ ಇರುತ್ತಾರೆಂದರೆ ಸರಿಯಲ್ಲ. ವಾದಿಗೆ ಹಕ್ಕು ಇದ್ದರೂ ಅದನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.
Sd/-24.02.2026
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ Sd/-24.02.2026